**ಕರ್ನಾಟಕ ವಿಧಾನ ಪರಿಷತ್ತು**

**ಲಘು ಪ್ರಕಟಣೆ ಭಾಗ - 2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂದಿಸಿದ ಸಾಮಾನ್ಯ ಮಾಹಿತಿ)**

**ಗುರುವಾರ, ದಿನಾಂಕ:22 ನೇ ಏಪ್ರಿಲ್, 2021**

ಸಂಖ್ಯೆ: 44.

**ವಿಷಯ:** 2021-22ನೇ ಸಾಲಿನಿಂದ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಆಪ್ತ ಸಹಾಯಕರುಗಳ ನೇಮಕಾತಿ/ಸೇವಾ ವಿಷಯ/ವೇತನ/ಮತ್ತಿತರ ಭತ್ಯೆಗಳನ್ನು ಸಚಿವಾಲಯದ ವತಿಯಿಂದ ನಿರ್ವಹಿಸುವ ಕುರಿತು

*********

ಸರ್ಕಾರದ ಆದೇಶ ಸಂಖ್ಯೆ : ಆಇ/418/ವೆಚ್ಚ-7/2020 ಬೆಂಗಳೂರು ದಿನಾಂಕ: 06.03.2021 ರನ್ವಯ ಮತ್ತು ಕರ್ನಾಟಕ ವಿಧಾನ ಪರಿಷತ್ತಿನ ಆದೇಶ ಸಂಖ್ಯೆ:ಕವಿಪ:ಆ-1:10:ವಿಪಸಆಸ:2021, ಬೆಂಗಳೂರು, ದಿನಾಂಕ: 20.04.2021ರ ರೀತ್ಯಾ 2021-22ನೇ ಸಾಲಿನಿಂದ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳು ಆಪ್ತ ಸಹಾಯಕರುಗಳ ನೇಮಕಾತಿ/ಸೇವಾ ವಿಷಯ/ ವೇತನ/ ಮತ್ತಿತರ ಭತ್ಯೆಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯದಿಂದ ನಿರ್ವಹಿಸಲು ಅದೇಶವಾಗಿರುತ್ತದೆ.

ಸದರಿ ಆದೇಶಗಳನ್ವಯ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳ ಆಪ್ತ ಸಹಾಯಕರುಗಳಿಗೆ ವೇತನ ಪಾವತಿಗೆ ಕ್ರಮವಹಿಸಲಾಗುತ್ತಿದೆ. **ಮಾನ್ಯ ಸದಸ್ಯರುಗಳು ತಮ್ಮ ಆಪ್ತ ಸಹಾಯಕರುಗಳ ಹಾಜರಾತಿಯನ್ನು ತಪ್ಪದೇ ಪ್ರತಿ ತಿಂಗಳು 2ನೇ ತಾರೀಖಿನೊಳಗಾಗಿ ಕಡ್ಡಾಯವಾಗಿ ಲೆಕ್ಕಪತ್ರ ಶಾಖೆಗೆ ಕಳುಹಿಸಿಕೊಡಬೇಕೆಂದು ತದನಂತರ ಸ್ವೀಕರಿಸಲಾಗಿರುವ ಹಾಜರಾತಿಯನ್ನು ಮುಂದಿನ ಮಾಹೆಯ ವೇತನದೊಂದಿಗೆ ಸೇರಿಸಿಕೊಳ್ಳಲಾಗುವುದು ಹಾಗೂ ತಮ್ಮ ಆಪ್ತ ಸಹಾಯಕರುಗಳ ಮಾಹಿತಿಯನ್ನು ಈ ಲಘು ಪ್ರಕಟಣೆಯ ಜೊತೆಗೆ ನಮೂದಿಸಿರುವ ನಮೂನೆಯಲ್ಲಿ ಅಧೀನ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ, ಕೊಠಡಿ ಸಂಖ್ಯೆ: 216(ಸಿ), ಎರಡನೇ ಮಹಡಿ, ವಿಧಾನ ಸೌಧ,** ಬೆಂಗಳೂರು ಇವರಿಗೆ ಕಳುಹಿಸಬೇಕೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಕೆ.ಆರ್.ಮಹಾಲಕ್ಷ್ಮಿ,
ಕಾರ್ಯದರ್ಶಿ,
ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಸದಸ್ಯರುಗಳಿಗೆ ,

# ಕರ್ನಾಟಕ ವಿಧಾನ ಪರಿಷತ್ತು ಸಚಿವಾಲಯ

## ನಮೂನೆ

ಮಾನ್ಯ ಸದಸ್ಯರಿಂದ ನೇಮಕಗೊಂಡಿರುವ ಆಪ್ತ ಸಹಾಯಕರ ವಿವರ

| ಕ್ರ.ಸಂ | ಅಧಿಕೃತವಾಗಿ ನೇಮಕಾತಿ ಹೊಂದಿರುವ ಆಪ್ತ ಸಹಾಯಕರುಗಳ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ಆಪ್ತ ಸಹಾಯಕರು ಸೇವೆ ಸಲ್ಲಿಸುತ್ತಿರುವ ವಿವರ | | | |
|---|---|---|---|---|---|
| | | ಇಲಾಖೆಯಿಂದ ನಿಯೋಜನೆ ಮೇರೆಗೆ | ಖಾಸಗಿ/ಗುತ್ತಿಗೆ ಆಧಾರದ ಮೇರೆಗೆ | ನಿಗಮ/ಮಂಡಳಿ ಸಿಬ್ಬಂದಿಗಳು | ನೇಮಕಗೊಂಡ ದಿನಾಂಕ |
| 01 | | | | | |
| 02 | | | | | |

ಮೇಲ್ಕಂಡ ಸಿಬ್ಬಂದಿಗಳು ನನ್ನ ಆಪ್ತ ಸಹಾಯಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ:

ಮಾನ್ಯ ಸದಸ್ಯರ ಹೆಸರು ಮತ್ತು ಸಹಿ

ವಿ.ಸೂ. ಮೇಲ್ಕಾಣಿಸಿದ ಅಪ್ತ ಸಹಾಯಕರ ಪೈಕಿ ಬದಲಾವಣೆಯಾದಲ್ಲಿ ಮಾಹಿತಿಯನ್ನು ಕೂಡಲೇ ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ, ಇವರಿಗೆ ತಿಳಿಸತಕ್ಕದ್ದು.